# ಮರುಭೂಮಿಯಲ್ಲಿ ಮರುಜನ್ಮ



## ಸಾಹಸಿ ಅಥ್ಲೀಟ್ ಮೌರೊ ಪ್ರಾಸ್ಪೆರಿಯ ರೋಚಕ ಕಥನ

'ಮರಳುಗಾಡಿನ ಮ್ಯಾರಥಾನ್'ನಲ್ಲಿ ದಿಕ್ಕುತಪ್ಪಿದ ಮೌರೊ ಪ್ರಾಸ್ಪೆರಿ ಎಂಬ ಅಥ್ಲೀಟ್, ರಣಬಿಸಿಲಲ್ಲಿ ಒಂಬತ್ತು ದಿನ ಒಬ್ಬಂಟಿಯಾಗಿ ಅನುಭವಿಸಿದ ಜೀವನ್ಮರಣದ ಸಾಹಸಗಾಥೆಯಿದು. ಮರುಭೂಮಿಯಲ್ಲಿ ಮರುಜನ್ಮ ಪಡೆದ ಮೌರೊನ ಕಥೆ ಸಾಹಸಿ ಅಥ್ಲೀಟ್‌ಗಳಿಗೆ ದಾರಿದೀಪ.

■ ಸುಚೇತಾ ಕೆ. ನಾರಾಯಣ್

**1994**ರ ಏಪ್ರಿಲ್ ತಿಂಗಳು. 'ಮ್ಯಾರಥಾನ್ ಡೆಸ್ ಸೇಬಲ್ಸ್' ಓಟದ ಆರಂಭದ ಗೆರೆಯ ಬಳಿ ನಿಂತಿದ್ದ 39 ವರ್ಷದ, ದೃಢಕಾಯದ ಇಟಾಲಿಯನ್ ಅಥ್ಲೀಟ್ ಮೌರೊ ಪ್ರಾಸ್ಪೆರಿ ಮೊಗದಲ್ಲಿ ಛಲ ಎದ್ದುಕಾಣುತ್ತಿತ್ತು. ಮೌರೊಗೆ ಪದಕ ಗೆಲ್ಲಲೇಬೇಕೆಂಬ ಮಹದಾಸೆ. ಅದಕ್ಕಾಗಿ ಅಚ್ಚುಕಟ್ಟಾದ ತಯಾರಿಯನ್ನೂ ನಡೆಸಿದ್ದ. ಸುತ್ತಲಿನ ಪ್ರಕೃತಿ ಸೌಂದರ್ಯ ಸವಿಯುವ ಮನಸ್ಥಿತಿಯೇ ಆತನದಾಗಿರಲಿಲ್ಲ. ಆಲೋಚನೆಯೆಲ್ಲಾ ಪದಕದ ಮೇಲೆ. ಅಂತೂ ಎಂಬತ್ತು ಜನರಿದ್ದ 'ಮರುಭೂಮಿಯ ಮ್ಯಾರಥಾನ್' ಪ್ರಾರಂಭವಾಯಿತು.

ಮೊರಾಕ್ಕೋ ದೇಶದ ಮರುಭೂಮಿಯಲ್ಲಿ ನಡೆಯುವ 'ಮ್ಯಾರಥಾನ್ ಡೆಸ್ ಸೇಬಲ್ಸ್', ಅಂದರೆ 'ಮರಳುಗಾಡಿನ ಮ್ಯಾರಥಾನ್' ಬಹಳ ಜನಪ್ರಿಯ. ನೆತ್ತಿ ಸುಡುವ ಉರಿಬಿಸಿಲಿನಲ್ಲಿ ನಡೆಯುವುದೇ ಪ್ರಯಾಸವೆನಿಸುವ ಸಹಾರ ಮರುಭೂಮಿಯ ಮಡಿಲಲ್ಲಿ 251 ಕಿ.ಮೀ. ದೂರವನ್ನು 6 ದಿನಗಳಲ್ಲಿ ಮುಗಿಸಬೇಕಿರುವುದು ಈ ಅಲ್ಟ್ರಾ ಮ್ಯಾರಥಾನ್ ಒಡ್ಡುವ ಸವಾಲು. ಇಲ್ಲಿ ಸವಾಲಾಗಿ ನಿಲ್ಲುವುದು ದೂರವಲ್ಲ, ಬದಲಿಗೆ ಭೀಷಣ ಪ್ರಕೃತಿ.

ನಯವಾದ ಮರಳು, 50 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚಿನ ಬಿಸಿಲು, ಬೀಸುವ ಬಿರುಗಾಳಿ, ತಾಪಕ್ಕೆ ಸುಟ್ಟು ಕರಕಲಾಗುವ ಚರ್ಮ, ಪಾದದ ತುಂಬೆಲ್ಲ ಏಳುವ ಬೊಬ್ಬೆಗಳು... ಇದೆಲ್ಲವನ್ನೂ ಮೆಟ್ಟಿನಿಲ್ಲುವ ಛಾತಿ ಬೇಕು. ಸ್ಪರ್ಧಿಗಳು ತಮಗೆ ಬೇಕಾದ ಸಾಮಗ್ರಿಗಳನ್ನು ತಮ್ಮ ಬೆನ್ನಿಗಿರಿಸಿಕೊಂಡೇ ಓಡಬೇಕು. ಆ ಚೀಲದ ತೂಕ 6ರಿಂದ 14 ಕೆ.ಜಿ.ಗಳವರೆಗೂ ಆದೀತು. 'ಮಿನಿಮಲಿಸಂ' ಬಹಳ ಮುಖ್ಯವಿಲ್ಲಿ. ಒಂದೊಂದು ಗ್ರಾಂ ಸಹ ಸೋಲು ಗೆಲುವಿನ ನಡುವಿನ ಅಂತರ ನಿರ್ಧರಿಸಿಬಿಡಬಲ್ಲದು. ಹಾಗಾಗಿ ತಮ್ಮ ಚೀಲದ ತೂಕವನ್ನಿಳಿಸಲು ಪ್ರತಿಯೊಬ್ಬರೂ ವಿಧವಿಧದ ತಂತ್ರಗಳನ್ನು ಅನುಸರಿಸುತ್ತಾರೆ. ಹಲ್ಲುಜ್ಜುವ ಬ್ರಶ್‌ನ ಹಿಡಿಕೆ ತುಂಡರಿಸುವುದರಿಂದ ಹಿಡಿದು, ತಮ್ಮ ಮಲಗುವ ಚೀಲದ ದಾರವನ್ನು ಕತ್ತರಿಸುವವರೆಗೂ ಅವರ ಪ್ರಯತ್ನ ಸಾಗುತ್ತದೆ. ಇಲ್ಲಿ ನೀರಿನ ಅವಶ್ಯಕತೆ ಬೇರೆಡೆಗಿಂತ ಹೆಚ್ಚಿರುವುದರಿಂದ ಅಲ್ಲಲ್ಲಿ ಚೆಕ್ ಪಾಯಿಂಟ್ ಮಾಡಿ ಸ್ಪರ್ಧಿಗಳಿಗೆ ನೀರು ಒದಗಿಸಲಾಗುತ್ತದೆ.

ತನ್ನ ಗುರಿಯ ಓಟ ಆರಂಭಿಸಿದ್ದ ಮೌರೊ ಪ್ರಾಸ್ಪೆರಿ ಪ್ರತಿದಿನದ ದೂರವನ್ನು ಆದಷ್ಟು ಬೇಗ ಕ್ರಮಿಸಿ ಟೆಂಟ್ ಸೇರಿಕೊಳ್ಳುತ್ತಿದ್ದ. ಸಂಜೆಯಾಗುತ್ತಿದ್ದಂತೆ ಎಲ್ಲರೂ ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತ ಖುಷಿಖುಷಿಯಾಗಿ ಸಮಯ ಕಳೆಯುತ್ತಿದ್ದರು. ಹೀಗೆ ಮೂರು ದಿನ ಕಳೆದವು. ನಾಲ್ಕನೇ ದಿನ ಅತ್ಯಂತ ಕ್ಲಿಷ್ಟಕರ ದಾರಿಯನ್ನು ಸ್ಪರ್ಧಾಳುಗಳು ಸವೆಸಬೇಕಿತ್ತು. ಫಲಿತಾಂಶ ಸಹ ಹೆಚ್ಚು ಕಡಿಮೆ ಆ ದಿನವೇ ನಿರ್ಧಾರವಾಗುತ್ತಿತ್ತು. ಹಾಗಾಗಿ ಪದಕ ಗೆಲ್ಲಲು ಕಟಿಬದ್ಧನಾಗಿದ್ದ ಮೌರೊ ಎಂದಿಗಿಂತ ಹೆಚ್ಚಿನ ಹುಮ್ಮಸ್ಸಿನಲ್ಲಿದ್ದ.

